10) ಇಂಧನಕೋಸ್ಕರ ಪರಿಸರ ನಿರ್ವಹಣೆ

11) ಸಂಚಾರಕ್ಕೋಸ್ಕರ ಪರಿಸರ ನಿರ್ವಹಣೆ

12) ಅರಣ್ಯ ಹಾಗೂ ಸಾಮಾನ್ಯ ಭೂಮಿಯ ನಿರ್ವಹಣೆ

13) 17,18 ಕೃಷಿ ಉತ್ಪಾದನೆಗೋಸ್ಕರ ನೈಸರ್ಗಿಕ ಸಂಪನ್ಮೂಲ ಹಾಗೂ ಜೀವಿ ಪರಿಸ್ಥಿತಿಯ ಸಮಗ್ರವಾದ ಬಳಕೆ.

14) ಸಾರ್ವಜನಿಕರಲ್ಲಿ ಜನ ಜಾಗೃತಿಯನ್ನು ಹೆಚ್ಚಿಸುವುದು ಹಾಗೂ ಪರಿಸರ ವಿಷಯಗಳಲ್ಲಿ ಪಾಲುಗೊಳ್ಳುವುದು.

15) ವೃತ್ತಿ ನಿರತ ಆರೋಗ್ಯ ಮತ್ತು ರಕ್ಷಣೆಯನ್ನು ಬಲಪಡಿಸುವುದು

16) ಪರಿಸರ ಸಮನ್ವಯ ನಿರ್ವಹಣೆಗಾಗಿ ವ್ಯವಸ್ಥೆ ಮತ್ತು ವಿಧಾನಗಳನ್ನು ಬಲಪಡಿಸುವುದು.

17) ವಿಸ್ತೃತ ತರಬೇತಿ ಕಾರ್ಯಕ್ರಮ.

ವಿಷಯ :- ಕೇರಳ ಎಲೆಕ್ಟ್ರಿಕಲ್ ಮತ್ತು ಅಲೈಡ್ ಇಂಜಿನಿಯರಿಂಗ್ ಸಂಸ್ಥೆಯಿಂದ ಜನರೇಟರ್‌ಗಳ ಖರೀದಿ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2393 (2999)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರಾಭಿವೃದ್ಧಿ ಮಂಡಳಿಗೆ ಕೇರಳ ಎಲೆಕ್ಟ್ರಿಕಲ್ಸ್ ಮತ್ತು ಅಲೈಡ್ ಇಂಜಿನಿಯರಿಂಗ್ ಸಂಸ್ಥೆಯು 1994 ರಲ್ಲಿ 250 ಕೆ.ವಿ.ಎ.ದ ಎರಡು ಜನರೇಟರ್‌ಗಳನ್ನು ಕೊಂಡಿರುವುದು ನಿಜವೆ ; ಹಾಗಿದ್ದಲ್ಲಿ ಈ ಜನರೇಟರ್‌ಗಳಿಗೆ ನೀಡಿದ ಮೊತ್ತವೆಷ್ಟು ;

ಆ) ಈ ಜನರೇಟರ್‌ಗಳು ಸರಬರಾಜಾದ ಕೇವಲ ಒಂದು ವರ್ಷದಲ್ಲಿ ದುರಸ್ಥಿಗೆ ಬಂದಿದ್ದು ಇಂತಹ ದೋಷಾಯುಕ್ತ ಮೆಷಿನರಿ ಖರೀದಿಗೆ ಸಂಬಂದಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ದುರಸ್ತಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಈ ಹಣವನ್ನು ಯಾರಿಂದ ವಸೂಲಿ ಮಾಡಲಾಗಿದೆ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):-

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೆ : ಕೇರಳ ಎಲೆಕ್ಟ್ರಿಕಲ್ಸ್ ಮತ್ತು ಅಲೈಡ್ ಇಂಜಿನಿಯರಿಂಗ್ ಕಂಪನಿ ಲಿ ; ಕೊಚ್ಚಿನ್ ಸಂಸ್ಥೆಯವರಿಂದ 1994 ರಲ್ಲಿ ಒಂದು ಟ್ರಾನ್ಸ್ಫಾರ್ಮರಿಗೆ ರೂ. 1,19,000-00 ಗಳಂತೆ (ತೆರಿಗೆ ರಹಿತ) 28 ಸಂಖ್ಯೆಯ 250 ಕೆ.ವಿ.ಎ. (ಜನರೇಟರ್‌ಗಳಲ್ಲಿ) ಟ್ರಾನ್ಸ್ಫಾರ್ಮರುಗಳನ್ನು ಖರೀದಿಸಿದೆ. ಇಲ್ಲಿಯವರೆಗೆ ಸಂಬಂದಿತರಿಗೆ ರೂ. 31,53,205-00 ಗಳು ಪಾವತಿಯಾಗಿರುತ್ತದೆ.

ಆ) ಈ ಟ್ರಾನ್ಸಫಾರ್ಮರುಗಳ ಪೈಕಿ 2 ಟ್ರಾನ್ಸ್‌ಫಾರ್ಮರುಗಳ ಬುಷಿಂಗ್‌ನಲ್ಲಿ ಸರಬರಾಜಾದ ಒಂದು ವರ್ಷದೊಳಗೆ ಎಣ್ಣೆಯು ಸೊರುತ್ತಿದ್ದುದನ್ನು ಒಪ್ಪಂದದ ಪ್ರಕಾರ ಕಂಪನಿಯವರೇ ದುರಸ್ಥಿ ಮಾಡಿಕೊಟ್ಟಿರುತ್ತಾರೆ.

ವಿಷಯ :- ಗಡಿನಾಡು ಕನ್ನಡಿಗರ ಆಶೋತ್ತರಗಳಿಗೆ ಕನ್ನಡಿಗ ಅಕಾಡೆಮಿಗಳನ್ನು ರಚನೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2396 (424)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕರ್ನಾಟಕ ಗಡಿನಾಡ ಕನ್ನಡಿಗರ ಆಶೋತ್ತರಗಳಿಗಾಗಿ ಕನ್ನಡಿಗ ಅಕಾಡೆಮಿಗಳನ್ನು ರಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

2. ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಳ್ಳಲಿರುವ ಕಾರ್ಯಕ್ರಮ ರೂಪ ರೇಷೆಗಳೇನು?

ಶ್ರೀಮತಿ ಬಿ. ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಅವೃಭದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :-

1. ಇಲ್ಲ.

2. ಉದ್ಭವಿಸುವುದಿಲ್ಲ.

ಉಪಾಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿ

I. ಶ್ರೀ ಎಂ. ಸಿ. ನಾಣಯ್ಯ :- (ಕಾನೂನೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೇ,

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿ) ಅವರ ಪರವಾಗಿ

1956 ನೇ ಸಾಲಿನ ಕರ್ನಾಟಕ ಸಚಿವರ ಸಂಬಳ ಮತ್ತು ಭತ್ಯಗಳ ಅಧಿನಿಯಮ 12 (2) (ಎ) (ಬಿ) ಕಲಮಿನ ಮೇರೆಗೆ ;

1) ಶ್ರೀ ಅಜಯಕುಮಾರ್ ಸರ್‌ನಾಯಕ್, ಯುವಜನ ಸೇವೆ ಮತ್ತು ಕ್ರೀಡೆಗಳ ರಾಜ್ಯ ಸಚಿವರ ವಿದೇಶ ಪ್ರವಾಸದ ಬಗ್ಗೆ ದಿನಾಂಕ 11-9-1995 ರಂದು ಹೊರಡಿಸಲಾದ ಡಿಪಿಎಆರ್ 68 ಜಿಎಎಮ್ 95 ರ ಆದೇಶ ;